ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 4, Jan-Feb, 2023, Pp. 98-102.
©*IIMRD*, Mysuru
IIMRD JOURNALS

www.iimrd.com

# ಅಥಣಿ ಪರಿಸರದ: ಒಂದು ಅವಲೋಕನ

***ಶ್ಯಾಮ ರಾ ಕಲ್ಲೋಳ್ಳಿ ಮತ್ತು ಡಾ. ಹನುಮಂತಪ್ಪ ಸಂಜೀವಣ್ಣನವರ****

*ಸಂಶೋಧನಾರ್ಥಿ, ಕನ್ನಡ ಅಧ್ಯಯನ ವಿಭಾಗ, ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯ, ಬೆಳಗಾವಿ.

**ಮಾರ್ಗದರ್ಶಕರು ಮತ್ತು ಸಹಾಯಕ ಪ್ರಾಧ್ಯಾಕರು, ಕನ್ನಡ ಅಧ್ಯಯನ ವಿಭಾಗ, ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯ, ಬೆಳಗಾವಿ.

***ಸಾರಾಂಶ: (Abstract)***

ಅಥಣಿ ತಾಲೂಕು ಬೆಳಗಾವಿ ಜಿಲ್ಲೆಯ ತಾಲೂಕುಗಳಲ್ಲಿ ವಿಶಿಷ್ಟ ಮತ್ತು ವೈಶಿಷ್ಟ್ಯ ಪೂರ್ಣವಾಗಿದೆ. “ಬೆಳಗಾವಿ ಜಿಲ್ಲೆಯು ಸಕ್ಕರೆ ಜಿಲ್ಲೆ ಎಂದು ಕರಿಸಿಕೊಳ್ಳಲು ಅಥಣಿ ತಾಲೂಕು ನೀಡಿದ ಸಿಹಿ ಕೊಡುಗೆ ಅಪಾರ, ಇದಕ್ಕೆ ಮುಖ್ಯ ಕಾರಣ ಈ ತಾಲೂಕಿನಲ್ಲಿ ಹರಿದು ಹಂಚಿ ತನ್ನ ಕರುಣೆ ಹಸ್ತ ಚಾಚಿದ ಕೃಷ್ಣೆ!”1 ಈ ಭೂಮಿಯ ಮೇಲೆ ಪ್ರಕೃತಿಗಿಂತ ಸೌಂದರ್ಯ ಮತ್ತೊಂದಿಲ್ಲ ಎಂಬ ಮಾತಿನಂತೆ ಅಥಣಿ ಪರಿಸರದಲ್ಲಿ ಹಳ್ಳ–ಕೊಳ್ಳ, ಕರೆ–ಬಾವಿ–ಕಟ್ಟೆ, ಬೆಟ್ಟ– ಗುಡ್ಡ, ಪ್ರಾಣಿ–ಪಕ್ಷಿಗಳಿಂದ ಸಮೃದ್ದವಾದ ತಾಣವು ಅಥಣಿ ಪರಿಸರವು ಆಗಿದೆ. ಪ್ರಸ್ತುತ ಲೇಖನದಲ್ಲಿ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕನ್ನು ಕುರಿತು ಚರ್ಚಿಸಲಾಗಿದೆ.

***ಮುಖ್ಯಪದಗಳು: (Keywords)*** *ಅಥಣಿ, ಬೆಳಗಾವಿ, ಪ್ರಕೃತಿ, ಪರಿಸರ.*

**ಪೀಠಿಕೆ**

ಕರ್ನಾಟಕವನ್ನು ಆಳಿದ ಅನೇಕ ರಾಜಮನೆತನಗಳಾದ ಕದಂಬರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಆದಿಲ್‌ಶಾಹಿಗಳು ಮತ್ತು ಮರಾಠರ ಆಡಳಿತದ ಪ್ರಭಾವ ಅಥಣಿ ಪರಿಸರದ ಮೇಲಾಗಿತ್ತು ಎನ್ನುವುದಕ್ಕೆ ಇಲ್ಲಿನ ಸ್ಮಾರಕಗಳು, ದೇವಾಲಯಗಳು, ಶಾಸನಗಳಿಂದ ತಿಳಿದುಬರುತ್ತದೆ. “ಅಥಣಿಯ ಅಮೃತಲಿಂಗೆಶ್ವರ ಹಾಗೂ ಸಿದ್ದೇಶ್ವರ ದೇವಾಲಯಗಳು ತುಂಬಾ ಪ್ರಾಚೀನ ವಾಸ್ತುಶಿಲ್ಪದ ಕುರುಹಾಗಿ ಗುರುತಿಸಬಹುದಾಗಿದೆ.”[2] ಸುಂದರವಾದ ಕಟ್ಟಡ ಮತ್ತು ಮೂರ್ತಿಗಳ ಕೆತ್ತನೆಯಿಂದ ನವರಂಗ, ಕಂಬಗಳಿಂದ, ಮುಖ ಮಂಟಪಗಳಿಂದ ಕೂಡಿವೆ. ಇನ್ನು ಅನೇಕ ಪ್ರಾಚೀನವಾದ ದೇವಾಲಯಗಳು ಅಥಣಿ ಪರಿಸರದಲ್ಲಿ ಕಾಣಬಹುದಾಗಿದೆ.

“ಅಥಣಿ ಇದರ ರೂಪ ನಿಷ್ಪತ್ತಿಯ ಬಗ್ಗೆ ವಾದ ವಿವಾದಗಳಿವೆ. ಅಥಣಿ ಇದು ಅಧಣಿ ಎಂಬ ಅಪಭ್ರಂಶದಿಂದ ಉಂಟಾಗಿದೆ ಎಂದು ಹೇಳುತ್ತಾರೆ. ಈ ಊರು ಧಣಿ ಅಥವಾ ಯಜಮಾನ ಇಲ್ಲದ ಊರು ಅಧಣಿಯಾಗಿದೆ. ಮುಂದೆ ಕಲಾಂತರದಲ್ಲಿ ಅಥಣಿಯಾಗಿದೆ.”[3] ಅಥಣಿ ಪದದ ನಿಷ್ಪತಿಯ ಬಗ್ಗೆ ಅನೇಕ ಕಾರಣಗಳು ಅಧ್ಯಯನ ಕೈಗೊಂಡಾಗ ತಿಳಿಯುತ್ತವೆ. ಅಥಣಿ ಪರಿಸರದಲ್ಲಿ ಜನರು ವ್ಯವಸಾಯವನ್ನು ಮುಖ್ಯ ಉದ್ಯೋಗವನ್ನಾಗಿ ಮಾಡಿಕೊಂಡು ಜನರು ಜೀವನ ಸಾಗಿಸುತ್ತಾರೆ. ಎಲ್ಲಾ ಬೆಳೆಗಳನ್ನು

*Please cite this article as:* *ಶ್ಯಾಮ ರಾ ಕಲ್ಲೋಳ್ಳಿ ಮತ್ತು ಡಾ. ಹನುಮಂತಪ್ಪ ಸಂಜೀವಣ್ಣನವರ.* (2023). ಅಥಣಿ ಪರಿಸರದ: ಒಂದು ಅವಲೋಕನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ. 4(4). ಪು. ಸಂ. 98–102.*

ಬೆಳೆಯುತ್ತಾರೆ. ವ್ಯಾಪಾರವು ಎರಡನೇಯ ಪ್ರಮುಖ ಉದ್ಯೋಗವಾಗಿದೆ. "ಅಥಣಿ ತಾಲೂಕಿನಲ್ಲಿ ವೀರಶೈವ ಧರ್ಮ ಹಾಗೂ ಜೈನ ಧರ್ಮಗಳ ಜನರು ಹೆಚ್ಚಾಗಿದ್ದಾರೆ. ಈ ಎರಡೂ ಧರ್ಮೀಯರ ಮಠ–ಮಂದಿರ ಬಸದಿಗಳು ಈ ತಾಲೂಕಿನಲ್ಲಿ ಹೇರಳವಾಗಿವೆ ಹಾಗೂ ವೀರಶೈವ ಗುರುಗಳು, ಜೈನ ಮುನಿಗಳು ಹೆಚ್ಚಾಗಿದ್ದಾರೆ."[4]

ಅಥಣಿ ಎಂಬ ಹೆಸರು ಬಂದ ತಕ್ಷಣ ಕಣ್ಣು ಮುಂದೆ ಬರುವ ಎರಡು ಪ್ರಭಾವಿ ಹೆಸರುಗಳು ಒಂದು ಪರಮ ಶ್ರೀ ಮುರುಘೇಂದ್ರ ಸ್ವಾಮಿಗಳು ಮತ್ತು ಗಚ್ಚಿನ ಮಠ. ಶ್ರೀ ಮುರುಘೇಂದ್ರ ಶಿವಯೋಗಿಗಳು ಎಂದ ತಕ್ಷಣ ಪ್ರಣವದ ನಾದ ಮೊಳಗುತ್ತದೆ. ಬಾಳಿನ ಕತ್ತಲೆಯು ಕಳೆಯುತ್ತದೆ. ಎಲ್ಲಾ ಸಾಧನೆ ಸಿದ್ದಿ ಪುರುಷ, ಯೋಗ ಅಷ್ಟಾಂಗಗಳು ಯಾವುದರಲ್ಲಿ ಲೀನವಾಗುತ್ತದೆಯೋ ಅಂತಹ ಶಿವಯೋಗದ ಗದ್ದುಗೆಯನ್ನು ಏರಿಕುಳಿತ ಕನ್ನಡನಾಡಿನ ಏಕೈಕ ಶಿವಯೋಗದ ಪುಣ್ಯಪುರುಷ ಇವರು ಅಥಣಿ ತಾಲೂಕಿನ ನದಿ ಇಂಗಳಗಾಂವ ಎಂಬ ಸಣ್ಣ ಗ್ರಾಮದಲ್ಲಿ ಜನಸಿದ್ದರು. ತಂದೆ ತಾಯಿಯರು 'ಗುರುಲಿಂಗಯ್ಯ' ಎಂದು ನಾಮಕರಣ ಮಾಡುತ್ತಾರೆ. ಗುರುಲಿಂಗಯ್ಯ ಕುಟುಂಬದ ದೀಪ ಮಾತ್ರವಲ್ಲ ಸಮಾಜದ ದೀಪವಾಗಲೆಂದು ಗಚ್ಚಿನ ಮಠಕ್ಕೆ ಚಿಕ್ಕ ಮಗುವಾಗಿದ್ದಾಗಲೆ ಗಚ್ಚಿನ ಮಠಕ್ಕೆ ಅರ್ಪಿಸುತ್ತಾರೆ. ಗಚ್ಚಿನ ಮಠ ಎರೆಡನೇಯ ಅಭಿನವ ಮಂತ್ರಾಲಯ ಎಂಬ ಹೆಸರು ಬಂದಿದೆ. ಈ ಮಠವನ್ನು ಗಚ್ಚಿನಿಂದ ನಿರ್ಮಿಸುವದರಿಂದ ಈ ಮಠಕ್ಕೆ "ಗಚ್ಚಿನ ಮಠ" ಎಂಬ ಹೆಸರು ಬಂದಿದೆ. ಗಚ್ಚು ಎಂದರೆ ವಸ್ತುವನ್ನು ಗಟ್ಟಿಗೊಳಿಸುವ ವಸ್ತು ಅದು ಶಕ್ತಿ, ದೃಡತೆ, ಸಾಮರ್ಥ್ಯಕ್ಕೆ ಸಂಕೇತ."[5]

ಕರ್ನಾಟಕವು ಧಾರ್ಮಿಕತೆಯ ಬೀಡಾಗಿದೆ. ಕರ್ನಾಟಕದ ಯಾವುದೇ ಭಾಗಕ್ಕೆ ಹೋದರೂ ಒಂದಾದರೂ ಮಠ, ಮಂದಿರ, ದೇವಾಲಯಗಳು, ಸಿಗುತ್ತವೆ. ಅದರಂತೆ ಅಥಣಿ ಪರಿಸರದಲ್ಲಿ ಕೂಡ ಯಾವುದೇ ಮೂಲೆಗೆ ಹೋದರೂ ಒಂದು ಮಠ ಸಿಗುತ್ತದೆ. "ಮಠ ಎಂದರೆ ಸನ್ಯಾಸಿಗಳು ವಾಸಿಸುವ ಸ್ಥಳ, 'ಛತ್ರಾದಿ ನಿಲಯ' ಎಂದು ಅಮರಕೋಶದಲ್ಲಿ ಅರ್ಥವಿದ್ದು, ಇಲ್ಲಿ ಗುರುಗಳು–ಶಿಷ್ಯರು, ಸನ್ಯಾಸಿಗಳು ವಾಸಿಸುವ ಯೋಗ್ಯವಾದ ಸ್ಥಳವೆಂದು ಉಲ್ಲೇಖವಿದೆ."[6]

ಧಾರ್ಮಿಕ ಸಾಂಸ್ಕೃತಿಯ ಚಟುವಟಿಕೆಗೆ ಮಠಗಳನ್ನೆ ಕೇಂದ್ರವಾಗಿಸಿಕೊಂಡು ಅಂದಿನವರು ಕಟ್ಟಿ ಬೆಳೆಸಿದ ರೀತಿ ವಿಶಿಷ್ಟ. ಇಲ್ಲಿ ಎಲ್ಲಾ ಧರ್ಮದ ಜನರು ಹೆಚ್ಚಾಗಿ ಕಂಡುಬರುತ್ತಾರೆ. ಲಿಂಗಾಯಿತರು, ಬ್ರಾಹ್ಮಣರು, ಮುಸ್ಲಿಂ, ಜೈನ, ಕುರುಬ, ಮರಾಠ, ಕುಂಬಾರ, ಪಾರ್ಶಿ, ಪರಶಿಷ್ಟಜಾತಿ, ಪರಶಿಷ್ಟ ಪಂಗಡ, ವಡ್ಡರು, ಗೊಲ್ಲರು ಮುಂತಾದ ಜನಾಂಗದವರು ಕಂಡುಬರುತ್ತಾರೆ. ಭಾಷಾ ಜ್ಯೋತಿಯು ಬೆಳಗದಿದ್ದರೆ ಇಡೀ ಜಗತ್ತೆ ಕತ್ತಲೆಯಲ್ಲಿ ತುಂಬಿ ತುಳಕುತ್ತಿತ್ತು! ಎಂದು ಹೇಳಿದ ಕವಿ ದಂಡಿ ಹೇಳಿದ ಮಾತು ಸತ್ಯವಾದದು. ಮನುಷ್ಯನ ಭಾವನೆಯು ಮಾತಿನ ಮೂಲಕ ಹೊರ ಹಾಕುವ ಸಾಧನವೇ ಭಾಷೆಯಾಗಿದೆ. "ಭಾಷಾ ಉಚ್ಚಾರಣೆಗೆ, ಆಡುನುಡಿಗೆ ಭೌಗೋಳಿಕ ಹಿನ್ನಲೆಯು ಕಾರಣವಾಗುತ್ತದೆ"[7].

ಅಥಣಿ ಪರಿಸರದಲ್ಲಿ ಮರಾಠಿ ಪ್ರಭಾವ ಹೆಚ್ಚಾಗಿದೆ. ಕರ್ನಾಟಕದ ಇತರ ಭಾಗದವರಿಗೆ ಇಲ್ಲಿನ ಒಂದೊಂದು ಮಾತು ವಿಪರೀತ. ಕರ್ನಾಟಕದ ಇತರೆ ಭಾಗದವರಿಗೆ ಇಲ್ಲಿನ ಮಾತು ಕೊಡಾ ಅರ್ಥವಾಗುವುದಿಲ್ಲ. ಉದಾ;– ಶಾಣ್ಯಾ (ಜಾಣ), ನಾಭೀ (ನಾನು), ನೀಬಿ (ನೀನು), ಇಕಡೆ( ಇಲ್ಲಿ)

ಆಜುಬಾಜು(ನೆರಹೊರೆ), ಅಗದಿ (ತೀರ), ಜರ (ಒಂದು ವೇಳೆ), ಠಗ್ಯ (ಮೋಸಗಾರ) ಖಬರ (ಸುದ್ದಿ ಅರಿವು) ಇನ್ನು ಮುಂತಾದ ಪದಗಳು ನಾವು ಕಾಣಬಹುದಾಗಿದೆ.

ಸ್ವತಂತ್ರ್ಯ ಸಂಗ್ರಾಮದಲ್ಲಿ ಅಥಣಿ ಪರಿಸರದ ಅನೇಕ ಗಣ್ಯವ್ಯಕ್ತಿಗಳು ಧುಮುಕಿದ್ದು ಇತಿಹಾಸದ ಪುಟಗಳಲ್ಲಿ ಸುವರ್ಣ ಅಕ್ಷರದಲ್ಲಿ ದಾಖಲಾಗಿದೆ. “1917ರಲ್ಲಿ ಅಥಣಿಗೆ ಭೇಟಿ ನೀಡಿದ ಲೋಕಮಾನ್ಯ ಬಾಲಗಂಗಾಧರ ತಿಲಕರು ಅಥಣಿಯ ಸ್ವತಂತ್ರ್ಯ ಸಂಗ್ರಾಮದ ದಿನಮಣಿ ಎನ್ನಬಹುದು”[8] ಲೋಕಮಾನ್ಯ ತಿಲಕರು ಅಥಣಿ ಪಟ್ಟಣಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ದೇಶಭಕ್ತಿಯ ಮಹತ್ವವನ್ನು ಮತ್ತು ಸ್ವತಂತ್ರ್ಯದ ಹೋರಾಟದ ಕಿಚ್ಚನ್ನು ಮನೆಮನೆಗೆ ಸಂಚರಿಸಿ ತಮ್ಮ ಮಾತುಗಳಿಂದ ಜನರನ್ನು ಹುರಿದುಂಬಿಸಿದ್ದರು. ತಿಲಕರು ಧರಿಸುತ್ತಿದ್ದ ‘ಪೇಟಾ’ ಅಥಣಿ ನಿವಾಸಿಯಾದ ನೊರಂದಪ್ಪ ಶೆಟ್ಟಿಯವರ ಮನೆಯಲ್ಲಿ ಇನ್ನು ಇದೆ. “ಅಥಣಿ ಪಟ್ಟಣದ ಜೇರೆಯವರು ಪ್ರಾಥಮಿಕ ಶಾಲಾ ಶಿಕ್ಷಕರ ಕೆಲಸವನ್ನು ತ್ಯಜಿಸಿ ಸ್ವತಂತ್ರ್ಯ ದೊರೆಯುವರಿಗೆ ತಲೆಗೆ ಟೊಪ್ಪಿಗೆ, ಕಾಲಿಗೆ ಚಪ್ಪಲಿ ಧರಿಸುವದಿಲ್ಲವೆಂದು ಅವರ ನಿಷ್ಠೆ ಕಠಿಣ ವ್ರತವಾಗಿತ್ತು. ಸ್ವತಂತ್ರ್ಯ ಕಂಕಣ ತೊಟ್ಟು ಅಖಂಡ ಬ್ರಹ್ಮಚಾರಿಯಾದರು.”[9] ಅಥಣಿ ಪರಿಸರದಲ್ಲಿ ಇನ್ನೂ ಅನೇಕ ಗಣ್ಯ ವ್ಯಕ್ತಿಗಳು ಸ್ವತಂತ್ರ್ಯ ಹೋರಾಟದಲ್ಲಿ ಧುಮಕಿದ್ದು ಇತಿಹಾಸದ ಪುಟಗಳಲ್ಲಿ ಕಾಣಬಹುದಾಗಿದೆ.

“ಭಾರತ ಕಂಡ ಅಪೂರ್ವ ಸಂತ ಮಹಾತ್ಮಗಾಂಧಿ, 1933ರಲ್ಲಿ ಅಥಣಿ ಪಟ್ಟಣಕ್ಕೆ ಭೇಟಿ ನೀಡಿದರು”[10]. ಅಥಣಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಯುವ ಹೃದಯಗಳಗೆ ಹೊರಾಟದ ಕನಸು ತುಂಬಿದರು. ಕನ್ನಡ ನಾಡು ನುಡಿಯ ಸಂಸ್ಕೃತಿಯ ಬಗ್ಗೆ ಹೊಗಳಿದರು. ಕನ್ನಡ ನಾಡು ನುಡಿ ಸಾಂಸ್ಕೃತಿಯನ್ನು ಉಳಿಸಿಕೊಂಡು ಬರುತ್ತಿರುವ ಗಡಿ ಪ್ರದೇಶದ ಭದ್ರ ಕೋಟೆಯಾಗಿ ಅಥಣಿ ಪಟ್ಟಣವು ಆಗಿದೆ. “ಅಥಣಿ ಗಡಿನಾಡಿನ ಮುಖುಟಮಣಿ ಮುಂಬಯಿ ಕರ್ನಾಟಕದ ಪ್ರಮುಖ ಪಟ್ಟಣ, ಎರಡು ಭಾಷೆ, ಎರಡು ಸಂಸ್ಕೃತಿ ಕೂಡಿಸಿ ಹೊಲಿಸಿ ಸುಂದರ ಕುಂಚಿಗೆ ಒಂದೆ ಹೃದಯದ ಎರಡು ತುಣುಕುಗಳಂತೆ ಜನರು ಬದುಕುತ್ತಿದ್ದಾರೆ.”[11]

ಸಾಮಾಜಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ, ರಾಜಕೀಯವಾಗಿ, ಯಾವುದೇ ಬೇಧವಿಲ್ಲದೆ ಬಾಳಿ ಬದುಕಿದ್ದಾರೆ ಮತ್ತು ಬದಕುತಿದ್ದಾರೆ. ಅಥಣಿಯಲ್ಲಿ ಸಾಹಿತ್ಯ ಸಮೇಳನ ನಡೆದ ಸಂದರ್ಭದಲ್ಲಿ “ಏಳು ಕನ್ನಡ ತಾಯಿ, ಬಾಳು ಕನ್ನಡ ತಾಯಿ, ಆಳು ಕನ್ನಡ ತಾಯಿ ಎಂದು ಹೇಳಿದ ಕನ್ನಡದ ಕಣ್ವ ಬಿ.ಎಂ.ಶ್ರೀ. ಯವರು ಆ ಸಮೇಳನದ ಅಧ್ಯಕ್ಷರಾದದು ಮಹತ್ವದ ಘಟನೆಯಾಗಿದೆ”[12]. ಅಥಣಿ ನಗರವನ್ನು ಅಥೇನ್ಸ್ ನಗರಕ್ಕೆ ಹೋಲಿಸಿ ಹೇಳಿದರು ಎನ್ನವುದು ಬೆಳಗಾವಿ ಗಝೇಟಿಯರ್‌ನಲ್ಲಿ ಉಲ್ಲೇಖವಿದೆ. ವರಕವಿ ಬೇಂದ್ರೆಯವರ ಭಾವಗೀತೆಯ ಮುನ್ನೋಟದ ಬಗ್ಗೆ ಮಾತನಾಡಿದರು. ಆಲೂರು ವೆಂಕಟರಾಯರು ‘ಕನ್ನಡ ಉಳಿದೆನೆಗೆ ಅನ್ಯ ಜೀವನವಿಲ್ಲ’ ಎಂಬ ತತ್ವ ಪ್ರತಿಪಾದಿಸಿದರು. ಆ ಸಂದರ್ಭದಲ್ಲಿ ಕನ್ನಡಾಂಭೆಯ ಜ್ಯೋತಿಯು ಬೆಳಕು ಮನೆ ಮನೆಯಲ್ಲೂ ಮತ್ತು ಮನ ಮನದಲ್ಲೂ ಹಬ್ಬುವಂತೆ ಮಾಡಿದರು. ಕನ್ನಡಾಂಬೆಯ ದ್ವಜವು ಮನೆ ಮನೆ ಮೇಲೆ ಹಾರಾಡುತ್ತವೆ. ಪ್ರತಿ ಜನರ ಮನದಲ್ಲಿ ಕುವೆಂಪುವರ ಕವಿತೆಗಳು ‘ಎಲ್ಲಾದರು ಇರು ಎಂತಾದರು ಇರು ಎಂದೆಂದಿಗೂ ನೀ ಕನ್ನಡವಾಗಿರು ಕನ್ನಡವೇ ಸತ್ಯ ಕನ್ನಡವೇ ನಿತ್ಯ’ ಎಂಬ ಕವಿತೆಯನ್ನು ಮನದಲ್ಲಿ ತುಂಬಿಕೊಂಡು ಹಾಡುತ್ತಿರುತ್ತಾರೆ.

ಅಥಣಿ ಪರಿಸರದಲ್ಲಿ ಬೆಳೆದ ಮಿರ್ಜಿ ಅಣ್ಣಾರಾಯರು ಬಹುಮುಖಿ ಸಾಹಿತ್ಯಗಾರರು, ಕನ್ನಡ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಇವರು ಸಾಮಾನ್ಯ ಮನೆತನದಲ್ಲಿ 1918 ಅಗಷ್ಟ 25ರಂದು ಜನಸಿದರು. ಇವರ ತಂದೆ ತಾಯಿ ಅಕ್ಷರಗಳನ್ನು ಕಲಿತವರಲ್ಲ, ಆದರೆ ತುಂಬಾ ಸುಸಂಸ್ಕೃತರು. ಇವರು ರಚಿಸಿದ ಕಥೆ, ಕಾದಂಬರಿ, ಕಥಾ ಸಂಕಲನಗಳು, ಪ್ರಬಂಧಗಳು, ಪ್ರವಾಸಿ ಕಥನಗಳು, ಶೈಕ್ಷಣಿಕ ಗ್ರಂಥಗಳು ಮುಂತಾದ ಕೃತಿಗಳನ್ನು ರಚಿಸುವುದರೊಂದಿಗೆ ನಾಡಿನಾದ್ಯಂತ ಖ್ಯಾತ ಸಾಹಿತಿಗಳಾಗಿ ಸಮಾಜದ ಚಿಂತಕರಾಗಿ ಹೊರಹೊಮ್ಮಿದ್ದಾರೆ. ಒಂದು ಪ್ರದೇಶದ ಅಭಿವೃದ್ಧಿಯನ್ನು ಪರಶೀಲಿಸುವಾಗ ಆ ಪ್ರದೇಶದ ಸಾಕ್ಷಾರತೆ ಪ್ರಮಾಣದಿಂದ ಅನಕ್ಷರತೆ ಅಂಧಕಾರದ ತಾಂಡವಾಡುತ್ತಿದ್ದ ಸಂದರ್ಭದಲ್ಲಿ ಅಥಣಿ ಪರಿಸರದ ಅನೇಕ ಗಣ್ಯವ್ಯಕ್ತಿಗಳು ಮತ್ತು ಶರಣರು ಶೈಕ್ಷಣಿಕ ಸಂಸ್ಥೆಗಳು ಪ್ರಾರಂಭವಾಗಲು ಪ್ರೋತ್ಸಾಹಿಸಿದ್ದರು. **"**ಸ್ವತಂತ್ರ್ಯದ ಪೂರ್ವದಲ್ಲಿ ಉತ್ತರ ಕರ್ನಾಟಕ ಗಡಿ ಭಾಗವಾದ ಅಥಣಿಯು ಮೊದಲು ಸಾಂಗಲಿ, ಜತ್ತ ಮತ್ತು ಜಮಖಂಡಿ ಮರಾಠ ಆಳರಸರ ಆಳ್ವಿಕೆಯ ಪ್ರಭಾವಕ್ಕೆ ಒಳಗಾಗಿತ್ತು.**"**[13] ಆದಕಾರಣದಿಂದ ಅನ್ಯ ಭಾಷೆಯ ಪ್ರಭಾವ ಹೆಚ್ಚಾಗಿತ್ತು. ಗಡಿಭಾಗದಲ್ಲಿ ಶೈಕ್ಷಣಿಕ ಕ್ಷೇತ್ರಕ್ಕೆ ಯಾರು ಗಮನ ಹರಸದಿರುವ ಕಾರಣದಿಂದ ಈ ಕ್ಷೇತ್ರದಲ್ಲಿ ಹಿಂದೆ ಉಳಿಯಿತ್ತು.

**"**ಶ್ರೀ ಹರಿನಾರಾಯಣ ಬಿಚ್ಚು ಎಂಬುವರು ಕನ್ನಡಿಗರು. ಇವರು ಮೀರಜ್‌ನಿಂದ ಅಥಣಿಗೆ ಬಂದು ನೆಲೆಸಿ ಕ್ರಿ.ಶ. 1957ರಲ್ಲಿ ಪ್ರಥಮವಾಗಿ ಕನ್ನಡ ಶಾಲೆಯೊಂದು ಪ್ರಾರಂಬಿಸಿದ್ದರು.**"**[14] ಹರಿನಾರಯಣವರು ಪ್ರಾರಂಭಿಸಿದ್ದ ಈ ಶಾಲೆಯು ಇಂದಿನ ಶಾಲೆಗಳಲ್ಲಿ ನಂ.1. ಶಾಲೆಯಾಗಿದೆ. ಈ ಒಂದು ಶಾಲೆಯಿಂದ ನೂರಾರು ಶಾಲೆಗಳು ಪ್ರಾರಂಭವಾದವು. ನಂತರದಲ್ಲಿ ಶಿಕ್ಷಣದತ್ತ ಒಲವು ಹೆಚ್ಚಾಗುತ್ತಾ ಉನ್ನತ್ತ ಶಿಕ್ಷಣ ಸಂಸ್ಥೆಗಳಾದ 1) ಜಾದವಜೀ ಶಿಕ್ಷಣ ಸಂಸ್ಥೆ 2) ಶ್ರೀ ಮುರಘೇಂದ್ರ ಶಿಕ್ಷಣ ಸಂಸ್ಥೆ 3) ಶ್ರೀ ಮುರಘರಾಜೇಂದ್ರ ಶಿಕ್ಷಣ ಸಂಸ್ಥೆ, ಇನ್ನು ಮುಂತಾದ ಉನ್ನತ ಶಿಕ್ಷಣ ಸಂಸ್ಥೆಗಳು ಪ್ರಾರಂಭವಾದವು. 1) ಜಾಧವಜಿ ಆನಂದಜೀ ಶಿಕ್ಷಣ ಸಂಸ್ಥೆ: 1918ರಲ್ಲಿ ಅಥಣಿಯ ಹಿರಿಯ ಉದ್ಯಮಿಗಳಾಗಿದ್ದ ಉದ್ಧವಜಿ ಆನಂದಜಿ ಭಾಟೆಯವರು ತಮ್ಮ ಸಹೋದರ ಜಾಧವಜಿ ಅವರ ಹೆಸರನಿಂದ ಭವ್ಯ ಕಟ್ಟಿಸಿಕೊಟ್ಟರು. ನಂತರ ಡಿ.ಬಿ.ಪವಾರ ದೇಸಾಯಿ ಕೊಕಟನೂರ ದೇಸಾಯಿ ಇನ್ನೀತರ ಮಹನೀಯರು ದಾನ ನೀಡಿದರು. ಶ್ರೀಮತಿ ಸುಧಾಮೂರ್ತಿಯವರು ಜೆ.ಎ.ಪದವಿ ಪೂರ್ವ ಮಹಾವಿದ್ಯಾಲಯದ ನೂತನ ಕಟ್ಟಡಕ್ಕೆ 11 ಲಕ್ಷಕ್ಕೂ ಮೇಲ್ಪಟ್ಟು ರೂಪಾಯಿಗಳು ಧನ ಸಹಾಯ ಮಾಡಿದ್ದರು. ಈ ರೀತಿಯಾಗಿ ಅನೇಕ ಗಣ್ಯವ್ಯಕ್ತಿಗಳಿಂದ ಈ ಶಿಕ್ಷಣ ಸಂಸ್ಥೆಯು ದೊಡ್ಡ ಶಿಕ್ಷಣ ಸಂಸ್ಥೆಯಾಗಿ ಹೊರ ಹೊಮ್ಮಿದೆ. 2) ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ (ಕೆ.ಎಲ್.ಇ ಸಂಸ್ಥೆ) ಶ್ರೀ. ಶಿ. ಶಿ. ಬಸವನಾಳ, ಬಿ.ಬಿ. ಮಮದಾಪೂರ, ಎಮ್. ಆರ್. ಸಾಖರೆ, ಬಿ. ಎಸ್. ಹಂಚಿನಾಳ, ಎಚ್. ಎಫ್. ಕಟ್ಟಿಮನಿ ಇವರೆಲ್ಲ ಒಟ್ಟಿಗೆಕೂಡಿ 1916ರಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸಿದ್ದರು.

ಅಥಣಿ ಗ್ರಾಮೀಣ ಪ್ರದೇಶದ ಬಹುಮುಖಿ ಕ್ರಿಡಾಪಟುಗಳು ರಾಜ್ಯ ಮತ್ತು ರಾಷ್ಟ್ರಮಟ್ಟಗಳಲ್ಲಿ ಪ್ರಸಿದ್ದಿಯನ್ನು ಪಡೆದುಕೊಂಡಿದ್ದಾರೆ. ಅಥಣಿಗೆ 17 ಕಿ. ಮೀ. ದೂರದಲ್ಲಿರುವ ಸತ್ತಿ ಗ್ರಾಮದ ವಿದ್ಯಾವರ್ಧಕ ಸಂಸ್ಥೆಯ ಜಿ.ಎ.ಎನ್.ಕೆ. ಪ್ರೌಡಶಾಲೆಯು 1989ರಿಂದ ಮಹಿಳಾ ಕಬ್ಬಡಿಯಲ್ಲಿ ಯಶಸ್ಸು ಸಾಧಿಸುವುದರ ಜೊತೆಗೆ ರಾಜ್ಯ ತಂಡಕ್ಕೆ ಪ್ರತಿಭಾವಂತ ಆಟಗಾರ್ತಿಯರನ್ನು ಒದಗಿಸುತ್ತಿದೆ. ಪುರುಷರಲ್ಲಿ ಕುಸ್ತಿ

ಕ್ರಿಡಾಪಟುಗಳು ಕಂಡುಬರುತ್ತಾರೆ. ಇತ್ತೀಚಿಗೆ ಕಡಿಮೆಯಾದರು ನಶಿಸಿಲ್ಲ. ವಾಲಿಬಾಲ್, ಕಬ್ಬಡ್ಡಿ, ಕ್ರಿಕೇಟ್ ಆಟಗಳಲ್ಲಿ ಹೆಸರು ಮಾಡಿರುವ ಅನೇಕ ಪ್ರತಿಭೆಗಳು ಅಥಣಿ ಪರಿಸರದಲ್ಲಿ ಕಾಣಿಸಿಕೊಳ್ಳುತ್ತಾರೆ. ಅಥಣಿಯು ಬೆಳಗಾವಿ ಜಿಲ್ಲೆಯ ತಾಲೂಕುಗಳಲ್ಲಿ ವಿಶಿಷ್ಟ ಮತ್ತು ದೊಡ್ಡದಾದ ತಾಲೂಕ್ಕಾಗಿದೆ. ಈ ರೀತಿಯಾದ ಅಥಣಿ ಪರಿಸರದ ಸಂಕ್ಷಿಪ್ತ ಪರಿಚಯವನ್ನು ಕಾಣಬಹುದಾಗಿದೆ.

**ಅಡಿ ಟಿಪ್ಪಣಿಗಳು**

1. ವ್ಹಿ. ಎಸ್. ಮಾಳಿ. (2017). ಅಥಣಿ ತಾಲೂಕು: ಸಮಗ್ರ ದರ್ಶನ. ಪು.ಸಂ.9
2. ಅದೇ., ಪು.ಸಂ.32
3. ಶ್ರೀ ಮಹಾಂತೇಶ.ಎಸ್.ಉಕ್ಕಲಿ. (2004). ಸುಕ್ಷೇತ್ರ–ಅಥಣಿ ಶ್ರೀ ಗಚ್ಚಿನ ಮಠ ದರ್ಶನ, ಪು.ಸಂ.3
4. ವ್ಹಿ. ಎಸ್. ಮಾಳಿ. (2017). ಪೂರ್ವೋಕ್ತ. ಪು.ಸಂ. 25
5. ಶ್ರೀ ಮಹಾಂತೇಶ ಎಸ್ ಉಕ್ಕಲಿ. (2004). ಪೂರ್ವೋಕ್ತ. ಪು.ಸಂ. 3
6. ಅದೇ. ಪು.ಸಂ.1
7. ವ್ಹಿ. ಎಸ್. ಮಾಳಿ. (2017). ಪೂರ್ವೋಕ್ತ. ಪು.ಸಂ. 25
8. ಅದೇ. ಪು.ಸಂ. 57
9. ಅದೇ. ಪು.ಸಂ. 58
10. ಅದೇ. ಪು.ಸಂ. 58
11. ಅದೇ. ಪು.ಸಂ. 67
12. ಅದೇ. ಪು.ಸಂ. 68
13. ಅದೇ. ಪು.ಸಂ. 137
14. ಅದೇ. ಪು.ಸಂ. 138
15. ಶ್ರೀ ಮಹಾಂತೇಶ ಎಸ್ ಉಕ್ಕಲಿ. (). ಪೂರ್ವೋಕ್ತ. ಪು.ಸಂ. 3
16. ವ್ಹಿ. ಎಸ್. ಮಾಳಿ. (2017). ಪೂರ್ವೋಕ್ತ. ಪು.ಸಂ. 9
17. ಶ್ರೀ ಮಹಾಂತೇಶ ಎಸ್. ಉಕ್ಕಲಿ. (2004). ಪೂರ್ವೋಕ್ತ. ಪು.ಸಂ.3

**ಪರಾಮರ್ಶನ ಗ್ರಂಥಗಳು**


- ವ್ಹಿ. ಎಸ್. ಮಾಳಿ. (2007). ಅಥಣಿ ತಾಲೂಕು: ಸಮಗ್ರ ದರ್ಶನ. ವಿಮೋಚನ ಪ್ರಕಾಶನ, ಅಥಣಿ. ಪು ಸಂ. 246.
- ಶ್ರೀ ಮಹಾಂತೇಶ ಎಸ್ ಉಕ್ಕಲಿ. (2004). ಸುಕ್ಷೇತ್ರ– ಅಥಣಿ ಶ್ರೀ ಗಚ್ಚಿನ ಮಠ ದರ್ಶನ. ಶ್ರೀ ಮುರಘೇಂದ್ರ ಶಿವಯೋಗಿ ಗ್ರಂಥಮಾಲೆ, ಅಥಣಿ. ಪು. ಸಂ. 23.
- ನಾಯಕ ಡಿ. ಬಿ. (2017). ಕರ್ನಾಟಕ ಗ್ರಾಮ ಚರಿತ್ರೆ ಕೋಶ ಬೆಳಗಾವಿ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೊಡಿ, ಪು. ಸಂ. 496.